# ಅಧ್ಯಾಯ - 6

# ಇತರ ಕ್ರೈಸ್ತವರೊಡನೆ ಸಹವಾಸ

## ವಂಶಮು ಮತ್ತು ದತ್ತತೆ

ನಾವು ಯೇಸುಕ್ರಿಸ್ತನನ್ನು ರಕ್ಷಕನಾಗಿ ಸ್ವೀಕರಿಸಿದಾಗ ದೇವರ ಕುಟುಂಬದಲ್ಲಿ ಒಂದು ಭಾಗವಾಗಿದ್ದೇವೆ. ದೇವರು ನಮ್ಮತಂದೆ. ಆತನು ನಮ್ಮನ್ನು ಮಗನಾಗಿ ದತ್ತತೆ ತೆಗೆದುಕೊಂಡಿದ್ದಾನೆ. (ಗಲಾತ್ಯ ೩ : ೨೬, ೨೭ ೪ : ೬, ೭) ಆದುದರಿಂದ ನಾವು ಸ್ವಾಭಾವಿಕವಾಗಿ ಜನಿಸದೇ ದೇವರಿಂದ ಹುಟ್ಟದವರಾಗಿದ್ದೇವೆ. ನಮಗೆ ಗಂಡುಹೆಣ್ಣು ಎಂಬಭೇದವಿಲ್ಲ. ನಾವು ಪವಿತ್ರರಾಗಿ ದೇವರಿಂದ ಪ್ರೀತಿಸಲ್ಪಟ್ಟ ಮಕ್ಕಳಾಗಿದ್ದೇವೆ. (ರೋಮಾ ೮ : ೩೮, ೩೯) ಆತನು ನಮ್ಮನು ಬಲಪಡಿಸಿ ನಮಗೆ ಬೇಕಾದದ್ದನ್ನು ಕೊಡುವನು. ನಾವು ಆತನ ಮಾರ್ಗದಲ್ಲಿ ನಡೆಯತ್ತಾ ಆತನ ಶಿಷ್ಯರಾಗಿ ಎಲ್ಲಾ ಕಾಲದಲ್ಲಿ ಜೀವಿಸುವವರಾಗಿದ್ದೇವೆ. (ಇಬ್ರಿಯ ೧೨ : ೫-೧೧) ನಿಜವಾಗಿ ದೇವರು ನಾವೂ ನೆನಸಿದಂತೆ ನಮ್ಮ ಒಳಿತಿಗಾಗಿ ಎಲ್ಲಾ ಒಳ್ಳೆಯ ಆಶೀರ್ವಾದಗಳನ್ನು ನಮಗೆ ಕೊಟ್ಟಿರುವನು. ನಾವು ಆತನಿಗೆ ವಿಧೇಯರಾಗಿ ಇರಬೇಕು. (ರೋಮಾ ೮ : ೨೮) ಈ ರೀತಿಯ ಧೈರ್ಯವನ್ನು ಆತನಲ್ಲಿ ಹೊಂದಿ ಆತನ ಸನ್ನಿಧಾನಕ್ಕೆ ಬಂದು ಆತನ ಸಹಾವಾಸದಲ್ಲಿ ಬೆಳೆಯುತ್ತಾ ಹೋಗಬೇಕು (ಎಫೆಸಿ ೩ : ೧೨)

## ನಾವು ಒಬ್ಬರಿಗೊಬ್ಬರು ಅನ್ಯೋನ್ಯ ವಾಗಿರುವುದು ಉತ್ತಮ

ಕ್ರೈಸ್ತರಾಗಿರುವ ನಾವು ದೇವರ ಕುಟುಂಬದ ಸದಸ್ಯರಾಗಿದ್ದೇವೆ. ಯಾವಾಗಲೂ ದೇವರೊಂದಿಗೆ ಸಮಾಧಾನವಾಗಿ ಇರುವವರೆಂದು ಸುತ್ತ ಇರುವ ಜನರು ನಮ್ಮನ್ನು ನೋಡಿ ತಿಳಿದುಕೊಳ್ಳಬೇಕು. ದೇವರಿಗೆ ಆತನ ಶುಭವಾರ್ತೆಯನ್ನು ಸುವಾರ್ತೆಯಲ್ಲಿ ಹೇಳುವುದರಲ್ಲಿ ನಾವು ಕಾಯುತ್ತಿರುವ ಬೆಂಕಿಯಂತೆ ಇರಬೇಕು. ಹೀಗೆ ದೇವರಲ್ಲಿ ನಾವು ಇಲ್ಲದಿದ್ದರೆ ಆತನ ಸಹಾವಾಸದಲ್ಲಿ ನಮಗೆ ಪಾಲು ಇಲ್ಲ.

ಆದುದರಿಂದ ದೇವರನ್ನು ಮಹಿಮೆ ಪಡಿಸುವ ರೀತಿಯಲ್ಲಿ ನಾವೂ ಆತನ ಒಳ್ಳೆಯ ಸಹವಾಸವನ್ನು ಇತರರಿಗೂ ಹಂಚಬೇಕು. ಕರ್ತನಾದ ಯೇಸು ಕ್ರಿಸ್ತನನ್ನು ಸ್ತುತಿಸುತ್ತಾ ಇರಬೇಕು. ಸಭೆಯು ಅನ್ನುವುದು. ಒಂದು ಅನುಭವವಲ್ಲ. ಅದು ಕರ್ತನಾದ ಯೇಸುವನ್ನು ಅನುಸರಿಸಲು ಆತನೊಂದಿಗೆ ನಡೆಯುತ್ತಾ ಆತನ ಮಕ್ಕಳೊಂದಿಗೆ ಸಹಾವಾಸ ಮಾಡುವುದಾಗಿದೆ. ಹೀಗೆ ನಮ್ಮ ಒಳ್ಳೆಯ ನಡತೆಯಿಂದ ಸುತ್ತಲಿರುವ ಅನೇಕರು ಯೇಸುಕ್ರಿಸ್ತನನ್ನು ನಂಬುವಂತೆ ನಾವು ಕ್ರಿಸ್ತನಲ್ಲಿ ಜೀವಿಸುವುದು ಅಗತ್ಯವಾಗಿದೆ.

## ದೇವರು ನಿನ್ನನ್ನು ತಿಳಿದಿದ್ದಾನೆ

ದೇವರು ನಿನ್ನನ್ನು ತಕ್ಷಣ ತಿಳಿದುಕೊಂಡವನ್ನಲ್ಲ. ನೀನು ಈ ಲೋಕದಲ್ಲಿ ಹುಟುಟವುದಕ್ಕೆ ಮುಂದೇ ಆತನು ನಿನ್ನನ್ನು ಬಲ್ಲವನಾಗಿದ್ದಾನೆ. ನೀನು ಹೇಗೆ ಇರಬೇಕೆಂದು ಎಲ್ಲಿ ಇರಬೇಕೆಂದು ಆತನಿಗೆ ತಿಳಿದದೆ.

> ''ನನ್ನ ಅಂತರಿಂದ್ರಿಯಗಳನ್ನು ಉಂಟುಮಾಡಿವನೂ ತಾಯಿಯ ಗರ್ಭದಲ್ಲಿ ನನ್ನನ್ನು ರೂಪಿಸಿದವನು ನೀನಲ್ಲವೋ ? ನೀನು ನನ್ನನ್ನು ಅದ್ಭುತವಾಗಿಯೂ ವಿಚಿತ್ರವಾಗಿಯಾ ರಚಿಸಿದ್ದರಿಂದ ನಿನ್ನನ್ನು ಕೊಂಡಾಡುತ್ತೇನೆ. ನಿನ್ನ ಕೃತ್ಯಗಳು ಆಶ್ಚರ್ಯವಾಗಿದೆ ಯೆಂದು ನನ್ನ ಹೃದಯವು ಚೆನ್ನಾಗಿ ಗ್ರಹಿಸಿಕೊಂಡಿದೆ. ನಾನು ಗುಪ್ತಸ್ಥಳದಲ್ಲಿ ಎರ್ಪಡುತ್ತಾ ಭೂಗರ್ಭದಲ್ಲಿ ರಚಿಸಲ್ಪಡುತ್ತಾ ಇದ್ದಾಗ ನನ್ನ ಅಸ್ಥಿ ಪಂಜರವು ನಿನಗೆ ಮರೆಯಾಗಿದ್ದಿಲ್ಲ. ನಾನು ಇನ್ನೂ ಕೇವಲ ಪಿಂಡವಾಗಿರುವಾಗ ನಿನ್ನ ಕಣ್ಣುಗಳು ನನ್ನನ್ನು ನೋಡಿದವು; ನನ್ನ ಆಆಯುಷ್ಯಾಲದ ಪ್ರಥಮ ದಿನವು ಪ್ರಾರಂಭವಾಗವ ಮಾದಲೇ ಅದರ ಎಲ್ಲಾ ದಿನಗಳು ನಿನ್ನ ಪುಸ್ತಕದಲ್ಲಿ ಬಲೆಯಲ್ಪಟ್ಟವು''
>
> (ಕೀರ್ತನೆ ೧೩೯:೧೩:೧೬.)

## ದೇವರು ನಿನ್ನ ಎಲ್ಲಾ ಅವಸರಗಳನ್ನು ಬಲ್ಲವನಾಗಿದ್ದಾನೆ.

ದೇವರು ಆತನಿಗಾಗಿ ಜೀವಿಸಲು ನಿನ್ನನು ಎರ್ಪಾಟು ಮಾಡಿಕೊಂಡಿದ್ದಾನೆ.

ಆದುವರಿಂದ ದೇವರು ಎನು ಮಾಡಬೇಕೆಂದು ನಿನ್ನನ್ನು ಕೋರುತ್ತಾನೋ ಅದನ್ನು ನೀನು ಮಾಡುವುದು ಒಳ್ಳೆಯದು. ಆತನಿಗಾಗಿ ಒಳ್ಳೆಯ ಸೇವೆಯನ್ನು ಮಾಡಲು ಸಿದ್ದನಾಗಿರು. ನೀನು ಕರ್ತನಾದ ಯೇಸುವಿನಲ್ಲಿ ಬಲವನ್ನು ಹೊಂದಿ ಸಭೆಯಲ್ಲಿ ಸಾಕ್ಷಿಯಾಗಿ, ಮನೆಯಲ್ಲಿ ಸಾಕ್ಷಿಯಾಗಿ ಜೀವಿಸಬೇಕು. ದೇವರು ನಿನಗೆ ಕೊಟ್ಟಿರುವ ಆತನ ವರಗಳನ್ನು ಆತನ ಪಕ್ಷವಾಗಿ ಆತನ ಮಹಿಮೆಗಾಗಿ ಉಪಯೋಗಿಸು. ಆಗದೇವರು ನಿನಗೆ ದೊಡ್ಡ ಕಾರ್ಯಗಳನ್ನು ಮಾಡಲು ಬಲವನ್ನು ಕೊಡುವನು.

## ಸಭೆಯ ನಮಗೆ ಮುಖ್ಯವಾದದ್ದು

ಈ ಲೋಕದಲ್ಲಿ ಸಭೆಯು ನಮಗೆ ತುಂಬಾ ಮುಖ್ಯವಾದದ್ದು. ಸಭೆಯಲ್ಲಿ ವಿಶ್ವಾಸಿಗಳೆಲ್ಲರೂ ಒಟ್ಟಾಗಿ ಸೇರಿ ದೇವರನ್ನು ಸ್ತುತಿಸುತ್ತಾ ಒಬ್ಬರಿಗೊಬ್ಬರು ಒಳ್ಳೆಯ ಸಹವಾಸವನ್ನು ಮಾಡಿ ಒಬ್ಬರಿಗೊಬ್ಬರು ಪ್ರಾರ್ಥನೆ ಮಾಡುವುದು ಒಳ್ಳೆಯದು. ಹೀಗೆ ಎಲ್ಲರೂ ಒಂದೇ ಮನೆಯವರಂತೆ ದೇವರಲ್ಲಿ ಬೆಳೆಯಲು ಸಾಧ್ಯವಿದೆ. ಒಂದೇ ರೀತಿಯ ಸಹವಾಸ, ಆತ್ಮದಲ್ಲಿ ಬೆಳೆಯವುದು, ದೇವರನ್ನು ಆರಾಧಿಸುವುದು, ದೇವರನ್ನು ಸ್ತುತಿಸುವುದು ರಕ್ಷಣೆಯ ವಾರ್ತೆಯನ್ನು ಎಲ್ಲೆಡೆ ಸಾರುವುದು. ಇದೇ ಸಭೆಯ ಸದಸ್ಯನಾಗಿ ಮಾಡುವ ಕಾರ್ಯಗಳಾಗಿವೆ.

> ''ಸಭೆಯಾಗಿ ಕೂಡಿಕೊಳ್ಳುವುದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟುಬಿಡದೆ ಒಬ್ಬರನೊಬ್ಬರು ಎಚ್ಚರಿಸೋಣ. ದೇವರ ಪ್ರತ್ಯಕ್ಷತೆಯ ದಿನವು ಸಮೀಪಸುತ್ತಾಬರುತ್ತದೆ ಎಂದು ನೀವು ನೋಡುವದರಿಂದ ಇದನ್ನು ಮತ್ತಷ್ಟು ಮಾಡಿರಿ''
>
> (ಇಬ್ರಿಯ ೧೦ : ೨೫)

## ಸಭೆಯು ಶರೀರದ ಒಂದು ಭಾಗ :

ಯೇಸುಕ್ರಿಸ್ತನು ಸಭೆಯ ತಲೆ ಎಂದು ಬೈಬಲ್ ಹೇಳುತ್ತದೆ. (ಎಫೆಸ ೧ : ೨೨, ೨೩) ಯೇಸುಕ್ರಿಸ್ತನಲ್ಲಿ ಮನುಷ್ಯನ ಶರೀರವು ಕ್ರಮವಾಗಿ ಕೆಲಸ ಮಾಡುತ್ತದೆ. ಹಾಗೆಯೇ ಸಭೆಯು ಯೇಸುಕ್ರಿಸ್ತನಲ್ಲಿ ಒಬ್ಬರಿಗೊಬ್ಬರು ಅಂಗವಾಗಿದ್ದಾರೆಂದು

ತಿಳಿಸುತ್ತದೆ. (ಎಫೆಸ ೪ : ೨೫) ಎಲ್ಲರು ಬೆಲೆಯುಳ್ಳವರು. ನಿಜವಾಗಿ ಒಬ್ಬರಿಗೊಬ್ಬರು ಸೇರಿ ಕೆಲಸ ಮಾಡಬೇಕು. (ಎಫೆಸ ೪ : ೧೬) ಹೀಗೆ ನಾವು ಕ್ರಿಸ್ತನಲ್ಲಿ ಆತನ ಶರೀರದಲ್ಲಿ ಭಾಗಗಳಾಗಿ ಜೀವಿಸುವವರಾಗಿದ್ದೇವೆ.

## ಸಭೆಯಲ್ಲಿ ಆರಾಧನೆ

ಸಭೆಯು ಸೇರಿದಾಗ ನಾವು ಮರೆಯದೆ ಆರಾದನೆಯಲ್ಲಿ ಬಾಗವಹಿಸಬೇಕು. ಆ ಸಮಯವನ್ನು ದೇವರಿಗಾಗಿ ಕಳೆಯಬೇಕು. ದೇವರು ಮಾಡಿದ ಎಲ್ಲಾ ಉಪಕಾರಗಳಿಗಾಗಿ ಆತನನ್ನು ಸ್ತುತಿಸ ಬೇಕು.

ನಾವು ಸಭೆಯಾಗಿ ಸೇರಿದಾಗ ನಾವು ಸೇರಿದ ಮನೆ ದೇವರ ಆಲಯವಲ್ಲ. ಸೇರಿದ ನಾವೇ ದೇವರ ಆಲಯವಾಗಿದ್ದೇವೆ. ಯೇಸು ಹೇಳಿದ್ದೇನೆಂದರೆ '' ಯಾಕೆಂದರೆ ಇಬ್ಬರು ಮೂವರು ನನ್ನ ಹೆಸರಿನಲ್ಲಿ ಎಲ್ಲಿ ಕೂಡಿ ಒಂದಿರುತ್ತಾರೋ ಅಲ್ಲಿ ಅವರ ನಡುವೆ ನಾನು ಇದ್ದೇನೆ'' (ಮತ್ತಾಯ ೧೫೮: ೨೦) ಹೀಗಿರುವಲ್ಲಿ ನಾವು ಎಂದಿಗೂ ದೇವರಿಗೆ ದೂರವಾಗಿ ಇರುವವರಲ್ಲ. ದೇವರು ನಮಗೆ ಯೇಸುಕ್ರಿಸ್ತನನ್ನು ಮಧ್ಯವರ್ತಿಯಾಗಿ ಕೊಟ್ಟಿದ್ದಾನೆ. ದೇವರ ಮನೆಗೆ ನಾವು ಸಭ್ಯರಾಗಿದ್ದೇವೆ. ಯೇಸುಕ್ರಿಸ್ತನಲ್ಲಿ ನಾವು ಐಕ್ಯವಾಗಿ ಪವಿತ್ರ ಆತ್ಮನಮೂಲಕ ದೇವರ ಆಲಯವಾಗಿ ನಾವೇ ಆತನಲ್ಲಿ ಜೀವಿಸುತ್ತಿದ್ದೇವೆ. (ಎಫೆಸಿ ೨ : ೧೯-೨೨)

ಕ್ರಿಸ್ತನ ಶರೀರದಲ್ಲಿ ಸಭೆಯಾದ ನಾವು ಹೀಗೆ ದೇವರಲ್ಲಿ ಬಲಗೊಂಡು ಮುಂದೆ ಸಾಗಬೇಕು.

## ಪ್ರಶ್ನೆಗಳು ಮತ್ತು ವಿಷಯಗಳು :

೧. ಇಬ್ರಿಯ ೧೦:೨೩, ೨೫ ವರೆಗೆ ಓದಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಎ) ದೇವರು ನಂಬಿಕೆಯುಳ್ಳವನೋ (೨೩ ವಚನ)

ಬಿ) ನಾವು ಒಬ್ಬರಿಗೊಬ್ಬರು ಯಾರಿಗಾಗಿ ಕೆಲಸಮಾಡಬೇಕು

ಸಿ) ಸಭೆಯಾಗಿ ಸೇರಬೇಕೋ (೨೫ ನೇ ವಚನ) (೨೪ ನೇ ವಚನ)

೨. ಕ್ರಿಸ್ತನ ಸಭೆಯಲ್ಲಿ ಸಭ್ಯರು ಹೇಗೆ ಅವರವರ ಕೆಲಸ ಮಾಡಬೇಕು ? (ರೋಮ ೧೨: ೩-೮)

೩. ಸಭೆಯ ವಿಶ್ವಾಸಿ ಮತ್ತೊಬ ವಿಶ್ವಾಸಿಯೊಡನೆ ಹೇಗೆ ಇರಬೇಕು ? (ಫಿಲಿಪ್ಪಿ ೨ : ೩) ( ೨ ಕೊರಿಂಥ ೧ : ೧೦)

೪. ಹಳೇಯ ಸಭೆಗಳಲ್ಲಿ ಪಾಲನ ಆಸೆ ಏನು ?

೫. ಸಭೆಯಲ್ಲಿ ನಾಯಕರೊಡನೆ ನಾವು ಹೇಗಿರಬೇಕು (ಇಬ್ರಿಯ ೧ : ೩-೭)

೬. ಸಭೆಯಲ್ಲಿ ವಿಶ್ವಾಸಿಗಳು ಏಕೆ ಒಟ್ಟಾಗಿರಬೇಕು ? ರೋಮಾ ೧೫ ೧೫,೬ ಯೊಹಾನ ೧೭ : ೨೦-೨೩)

೭. ಸಭೆಯಲ್ಲಿ ದೇವರಿಗಾಗಿ ನೀನು ಏನು ಮಾಡುವೆ ?

೮. ೧ ಕರಿಂಥ ೧೨ : ೧೨-೧೭ ಓದಿ ಈ ಕೆಳಗಿನ ಪ್ರಶ್ನೆಗೆ ಉತ್ತರಿಸು.

ಎ) ಈ ವಾಕ್ಯದ ಪ್ರಕಾರ ಸಭೆ ಎಂದರೆ ಹೇಗಿರ ಬೇಕು ?

ಬಿ) ಸಭೆಯಲ್ಲಿ ಒಬ್ಬಬ್ಬರು ಹೇಗೆ ವರ್ತಿಸಬೇಕು ?

ಸಿ) ನಾವು ಯಾವ ಬಗೆಯ ಕೆಲಸಮಾಡಬೇಕು ?

ಡಿ) ಸಭೆಯಲ್ಲಿ ಮಾಡುವ ಕೆಲಸ ನಾವೇ ಮಾಡಬೇಕೋ ?

ಇ) ದೇವರಿಗಾಗಿ ಏನೊ ಮಾಡದೆ ಇರುವುದು ಒಳ್ಳೆಯದೋ ?

ಈ) ಸಭೆಯಲ್ಲಿ ಎಲ್ಲರು ಕೆಲಸ ಮಾಡಬೇಕೋ ಅಥವಾ ನಾವೇ ದೇವರ ಕಾರ್ಯಗಳನ್ನು ಮಾಡಬೇಕೋ ?

## ಪ್ರಾರ್ಥನೆ :

ಶಕ್ತಿಯುಳ್ಳ ಯೇಸುಕ್ರಿಸ್ತನೇ ನಾನು ಸಭೆಯಲ್ಲಿ ಸೇರಿ ನಿನ್ನನ್ನು ಸತ್ಯದಿಂದ ಆರಾದಿಸುತ್ತಾ, ಸ್ತುತಿಸುತ್ತಾ ನಿನ್ನನ್ನು ಮಹಿಮ ಪಡಿಸುವ ಮಗನಾಗಿ ನನ್ನನ್ನು ಬಲಪಡಿಸ ಬೇಕೆಂದು. ಯೇಸುವಿನಲ್ಲಿ ಪ್ರಾರ್ಥಿಸಿ ಸ್ತುತಿಸುತ್ತೇನೆ. ಆಮೆನ್.